# ಶ್ರದ್ಧೆ ಎಂದರೆ ಆತ್ಮಸಾಕ್ಷಿಯ ಪಾಲನೆ

'ಕಠೋಪನಿಷತ್ತ'ನ ಮೊದಲ ಭಾಗದಲ್ಲೇ ಕೇಳಿಬರುವ 'ನನ್ನನ್ನು ಯಾರಿಗೆ ನೀಡುವೆ'– 'ಕಸ್ಮೈ ಮಾಂ ದಾಸ್ಯಸಿ' ಎನ್ನುವ ಪ್ರಶ್ನೆ ಅನೇಕಾನೇಕ ಅರ್ಥ ತರಂಗಗಳನ್ನು ಹಬ್ಬಿಸಬಲ್ಲ ಒಂದು ಬೀಜ ಪ್ರಶ್ನೆಯಾಗಿದೆ. ತಂದೆಯೊಡನೆ ಮಗ ನಚಿಕೇತ ಈ ಪ್ರಶ್ನೆಯನ್ನು ಕೇಳುತ್ತಿದ್ದಾನೆ. ತಂದೆಯಾದರೋ ದೊಡ್ಡದೊಂದು ಯಜ್ಞವನ್ನು ಏರ್ಪಡಿಸಿಕೊಂಡು ಆ ಯಜ್ಞದ ನಿಯಮದಂತೆ ತನ್ನ ಸಂಪತ್ತೆಲ್ಲವನ್ನೂ ದಾನ ನೀಡುತ್ತಿದ್ದಾನೆ. ಆದರೆ ಈ ನಡುವೆ ದಾನಯೋಗ್ಯವಲ್ಲದ ಮುದಿ ಹಸುಗಳನ್ನು ಕೂಡ ನೀಡುತ್ತಿದ್ದಾನೆ. ಇದು ನಿಸ್ವಾರ್ಥದ ನಡುವೆ ನುಸುಳಿಕೊಂಡಿರುವ ಸ್ವಾರ್ಥ. ನಿಸ್ವಾರ್ಥದ ರೂಪದಲ್ಲಿರುವ ಸ್ವಾರ್ಥ! ಈ ವಿಪರ್ಯಾಸವನ್ನು ಪ್ರಶ್ನಿಸಲೇಬೇಕಾಗಿದೆ; ಗುರುತಿಸಲೇಬೇಕಾಗಿದೆ. ಇಲ್ಲದಿದ್ದರೆ ಸಂಸ್ಕೃತಿಯೇ ಅರ್ಥವನ್ನು ಕಳೆದುಕೊಳ್ಳುತ್ತದೆ. ಆದರೆ ವ್ಯವಸ್ಥೆಯನ್ನು ಪ್ರಶ್ನಿಸುವುದು ಎಂದೂ ಸುಲಭದ ಮಾತಲ್ಲ. ಏಕೆಂದರೆ ವ್ಯವಸ್ಥೆಯಿಂದ ಅದಕ್ಕೊಳಪಟ್ಟ ಎಲ್ಲರಿಗೂ ಒಂದಲ್ಲ ಒಂದು ರೀತಿಯ ರಕ್ಷಣೆ– ಲಾಭ ಸಹಜವಾಗಿ ಇದ್ದೇ ಇರುತ್ತದೆ. ಈ ರಕ್ಷಣೆಯನ್ನು ಬಿಟ್ಟುಕೊಟ್ಟೇ ಪ್ರಶ್ನಿಸುವ ಎದೆಗಾರಿಕೆಯನ್ನು ಗಳಿಸಬೇಕಾಗಿದೆ.

ಆದರೆ ಇಂಥ ಎದೆಗಾರಿಕೆಯನ್ನು ಗಳಿಸಿಕೊಳ್ಳುವುದು ಒಂದು ಬೌದ್ಧಿಕವಾದ ಪಕ್ರಿಯೆ ಎಂದು ಉಪನಿಷತ್ತು ತಿಳಿಯುತ್ತಿಲ್ಲ. ಪ್ರತಿಯೊಂದು ಮನುಷ್ಯ ಜೀವಿಯ ಒಳಗಿರುವ ಮುಗ್ಧತೆ– ಇಂಥ ಎದೆಗಾರಿಕೆ ಸಹಜವಾಗಿಯೇ ಇರುತ್ತದೆ ಎಂಬುದು ಉಪನಿಷತ್ತಿನ ತಿಳುವಳಿಕೆಯಾಗಿದೆ. ತನ್ನದು ಎದೆಗಾರಿಕೆ ಎಂದು ಕೂಡ ಆ ತಿಳುವಳಿಕೆಗೆ ಗೊತ್ತಿರುವಂತಿಲ್ಲ. ಅದು ಅದ್ಭುತವಾದ ಎದೆಗಾರಿಕೆ ಹೌದು; ಆದರೆ ಹಾಗೆಂದು ಅದನ್ನು ಇನ್ನೊಬ್ಬರು ಗುರುತಿಸಬೇಕು– ಅಷ್ಟೇ. ಆದುದರಿಂದಲೇ ತನ್ನ ತಂದೆಯು ಪ್ರತಿನಿಧಿಸುತ್ತಿರುವ ವ್ಯವಸ್ಥೆಯ ವ್ಯುತ್ಕ್ರಮವನ್ನು ಪ್ರಶ್ನಿಸುವಾಗ ಆ ಪ್ರಶ್ನೆಯ ರಿತಿಯೇ ಬೇರೆಯಾಗಿದೆ! ತನ್ನನ್ನು ಯಾರಿಗೆ ನೀಡುತ್ತಿ ಎಂದು ಮಗ ಕೇಳುತ್ತಿದ್ದಾನೆ. ನೀನು ಮಾಡುತ್ತಿರುವುದು ತಪ್ಪೆಂದು ಅಬ್ಬರಿಸುತ್ತಿಲ್ಲ. ಈ ದೊಡ್ಡ ಸಭೆಯಲ್ಲಿ ಸೇರಿರುವ ವಿದ್ವಜ್ಜನರಾದರೂ ಏಕೆ ಈ ತಪ್ಪನ್ನು ಎತ್ತಿ ಹೇಳುತ್ತಿಲ್ಲ ಎಂದು ಕೂಗುತ್ತ ಕ್ರಾಂತಿಯ ಮಾತಾಡುತ್ತಿಲ್ಲ. ಪ್ರಶ್ನೆಯಲ್ಲಿ ತನ್ನ ಎದೆಗಾರಿಕೆಯ ಕಿಂಚಿತ್ತೂ ಪ್ರದರ್ಶನವಿಲ್ಲ. ಯಾವುದೇ ಖಣಖಣತ್ಕಾರವಿಲ್ಲದೆ ಹರಿತವಾದ ಅಲಗಿನಿಂದ ಸರಕ್ಕನೆ ಕೊಯ್ದಂತೆ ಇದೆ– ಪ್ರಶ್ನೆ.

ಏನು ಈ ಪ್ರಶ್ನೆಯ ಇಂಗಿತ?

ತಂದೆಯನ್ನು ಮಗ ಕೇಳುತ್ತಿದ್ದಾನೆ. ಯಾರಿಗಾಗಿ ನೀನು ಈ ನಾಟಕ ವಾಡುತ್ತಿರುವೆ? ನಿನಗಾಗಿ ಮತ್ತು ನಿನ್ನ ಮನೆ– ಮಕ್ಕಳಿಗಾಗಿ ತಾನೇ. ಆ ನಿನ್ನ ಮನೆ ಮಂದಿ ತಮಗೆ ಗೊತ್ತೇ ಇಲ್ಲದೆ ನಿನ್ನ ಅಕೃತ್ಯದಲ್ಲಿ ಪಾಲ್ಗೊಂಡಂತೆ ಆಯಿತಲ್ಲ! ಮನೆಯ ಯಜಮಾನನಾಗಿ ಅವರಿಗೆ ಇದೇ ಏನು ನಿನ್ನ ಕೊಡುಗೆ? ಈ ಸೂಕ್ಷ್ಮ ತಿಳಿದ ಮನೆಯ ಮಗನೊಬ್ಬನ ಕರ್ತವ್ಯವೇನು? ನಿನ್ನ ಯಜಮಾನ ಭಾವವನ್ನು ಒಪ್ಪಿಕೊಂಡೇ ಅವನು ತನ್ನ ಕರ್ತವ್ಯವನ್ನು ನಿರ್ವಹಿಸುವುದಾದರೆ ಅವನೇನು ಮಾಡಬೇಕು? ಈ ತಪ್ಪಿನಿಂದ ಮನೆಯನ್ನು ಕಾಪಾಡಬೇಕು. ಯಜಮಾನನನ್ನೂ ಕಾಪಾಡಬೇಕು' ತನ್ನನ್ನೂ ಕಾಪಾಡಿಕೊಳ್ಳಬೇಕು. ಹೇಗೆ? ಹೇಗೆಂದರೆ...'

ಮೊದಲು, ಅಂಥ ಮನೆಯ ಮಗನು ತನ್ನ ಆತ್ಮಸಾಕ್ಷಿಯ ಮಾತನ್ನು ಪಾಲಿಸಬೇಕು. ಆತ್ಮಸಾಕ್ಷಿ ಅವನಿಗೆ ಹೇಳುತ್ತಿದೆ– ನಿನ್ನ ಮುಂದೆ ನಡೆಯುತ್ತಿರುವುದರಲ್ಲಿ ಸ್ವಾರ್ಥದ ಸೋಂಕಿದೆ ಎಂದು. ಮಗನಾಗಿ, ತಂದೆಯ ಆ ಸ್ವಾರ್ಥದಲ್ಲಿ ಮಗನಿಗೂ ಪಾಲಿದೆ ಎಂದು. ಮೊದಲು ಆ ಸ್ವಾರ್ಥದ ಸೋಂಕನ್ನು ತೊಡೆದುಕೋ ಎಂದು. ಹೇಗೆ ತೊಡೆದುಕೊಳ್ಳಬೇಕು? ಹೇಗೆಂದರೆ– ನಿನ್ನನ್ನೇ ದಾನ ವಸ್ತುಗಳಲ್ಲಿ ಒಂದೆಂಬಂತೆ ಭಾವಿಸಿಕೋ. ಅಂದರೆ ನೀನು 'ಫಲಾನುಭವಿ' ಅಲ್ಲ ಎಂದುಕೊಂಡಂತೆ. ಬದಲಾಗಿ, 'ಫಲ'ವನ್ನು ಉಂಟುಮಾಡತಕ್ಕ ವಸ್ತು ಎಂದು ಕೊಂಡಂತೆ. ಇನ್ನೊಂದು ರೀತಿಯಲ್ಲಿ– ಇದು ಬಲಿದಾನಕ್ಕೆ ಸಿದ್ಧವಾದಂತೆ. ತನ್ನನ್ನು ತಾನು ಕಳೆದುಕೊಳ್ಳುವುದಕ್ಕೆ ತಾನು ಎಂಥದನ್ನೋ ಗಳಿಸಿಕೊಳ್ಳುವುದಕ್ಕೆ ಅಲ್ಲ– ಸಿದ್ಧವಾದಂತೆ. ಯಜ್ಞ ಯಾಗಾದಿ ಕರ್ಮಕಾಂಡಗಳಲ್ಲಿ ತೊಡಗಿ ಏನನ್ನೋ ಗಳಿಸಿಕೊಳ್ಳಬೇಕೆಂದಿರುವ ನಿಲುವಿಗಿಂತ ಇದು ಭಿನ್ನವಾದ ನಿಲುವು. ಆತ್ಮಸಾಕ್ಷಿಯ ಮಾತು ಸಾಮಾನ್ಯವಾಗಿ ಹೀಗೆಯೇ ಇರುತ್ತದೆ. ಅದು ಹೇಳುತ್ತದೆ: ನೀನು ಆತ್ಮವಂಚನೆ ಮಾಡಿಕೊಳ್ಳುತ್ತಿರುವೆ. ಆತ್ಮವಂಚನೆ ಎಂದರೆ ಆತ್ಮವನ್ನು ಕಳೆದುಕೊಂಡಂತೆಯೇ. ನನ್ನನ್ನು, ನಿನ್ನ ವ್ಯಕ್ತಿತ್ವದ ಅರ್ಕವಾಗಿರುವ ನನ್ನನ್ನು ಕಳೆದುಕೊಳ್ಳುತ್ತೀಯೇನು? ಇದನ್ನು ಕಳೆದುಕೊಂಡು– ಪ್ರತಿಯಾಗಿ– ಲೋಕದಲ್ಲಿ ನೀನು ಏನನ್ನು ಗಳಿಸಿಕೊಂಡರೆ ಏನು ಬಂತು? ಆದುದರಿಂದ ಆತ್ಮ ವಂಚನೆಯನ್ನು ಕಳೆದುಕೋ. ಆತ್ಮ ಲಾಭವನ್ನು ಮಾಡಿಕೋ– ಎಂದು.

ಆತ್ಮ ಸಾಕ್ಷಿಯ ಮಾತು– ವ್ಯಕ್ತಿಯನ್ನು, ಒಳ್ಳೆಯ ಅರ್ಥದಲ್ಲಿ ಬಲಿದಾನಕ್ಕೆ ಸಿದ್ಧಗೊಳಿಸುವ ಮಾತು. ನಿಜಕ್ಕಾದರೆ ಬಲಿದಾನ ವಾಗಬೇಕಿಲ್ಲ. ಆದರೆ ಲೋಕದ ಸುಳ್ಳು ನಡೆಯನ್ನು ಖಂಡಿಸದೆ ಇರುವಂತಿಲ್ಲ. ಖಂಡಿಸಿದರೆ ಅದರ ಪರಿಣಾಮವನ್ನು ಅನುಭವಿಸದೆಯೂ ಇರುವಂತಿಲ್ಲ. ಲೋಕ ತನ್ನ ಆತ್ಮಸಾಕ್ಷಿಯ ಮಾತನ್ನು ಕೇಳುವಂತೆ ಮಾಡಬೇಕಾದರೆ ತಾನು ತನ್ನ ಒಳಗಿನ ಮಾತನ್ನು– ಎಷ್ಟು ಬೆಲೆ ತೆತ್ತಾದರೂ– ಪಾಲಿಸಲೇಬೇಕು.

'ನನ್ನನ್ನು ಯಾರಿಗೆ ನೀಡುತ್ತಿ' ಎನ್ನುವ ಪ್ರಶ್ನೆ, ನಿನ್ನ ಸ್ವಾರ್ಥಕ್ಕಾಗಿ ನೀನು ಕಳೆದುಕೊಳ್ಳುತ್ತಿರುವುದೇನು ಎಂಬುದನ್ನು ಸೂಚಿಸುವ ಮಾತೂ ಆಗಿದೆ. ಅಂತರಂಗದ ಮಾತು, ಯಾರನ್ನು ಕುರಿತು ಆಡಲಾಗಿದೆಯೋ ಅವನನ್ನು ಅಂತರ್ಮುಖಿ ಗೊಳಿಸುವ ಮಾತೂ ಆಗಿದೆ. ಈ ಪ್ರಶ್ನೆ, ಒಂದಲ್ಲ ಒಂದು ರೀತಿಯಲ್ಲಿ ನಮ್ಮನ್ನೇ ಉದ್ದೇಶಿಸಿದೆ ಎಂದು ತಿಳಿದೆವಾದರೆ ನಮ್ಮನ್ನು ಅಂತರ್ಮುಖಿಗೊಳಿಸುವ ಮಾತೂ ಆಗಿದೆ. 'ಶ್ರದ್ಧೆ'ಯ ಮಾತು ನಮ್ಮ 'ಶ್ರದ್ಧೆ'ಯನ್ನು ಜಾಗರಿಸುವ ಮಾತೂ ಹೌದು. ಇದು ಉಪನಿಷತ್ತಿನ ಉದ್ದೇಶವೂ ಹೌದು.

■ ತೋಷ

## ಮಾತೇ ಮುತ್ತು

★ ದೇವರ ಮುಂದೆ ನಾವೆಲ್ಲರೂ ಸಮಾನ ಬುದ್ಧಿವಂತರು ಮತ್ತು ಸಮಾನ ಮೂರ್ಖರು.
ಐನ್‌ಸ್ಟೀನ್

★ ಬಡತನವು ಕ್ರಾಂತಿ ಮತ್ತು ಅಪರಾಧಗಳ ತಾಯಿ.
ಅರಿಸ್ಟಾಟಲ್

★ ಭೂತಕಾಲ ಮತ್ತು ವರ್ತಮಾನದ ನಡುವೆ ಜಗಳ ಹುಟ್ಟುಹಾಕಿದರೆ ನಾವು ಭವಿಷ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ.
ವಿನ್‌ಸ್ಟನ್ ಚರ್ಚಿಲ್

★ ಆರೋಗ್ಯದ ಕುರಿತ ಪುಸ್ತಕಗಳನ್ನು ಓದುವಾಗ ಎಚ್ಚರಿಕೆಯಿಂದಿರಿ. ಮುದ್ರಣ ತಪ್ಪುಗಳಿಂದಾಗಿ ನೀವು ಪ್ರಾಣ ಕಳೆದುಕೊಳ್ಳಲೂಬಹುದು.
ಮಾರ್ಕ್ ಟ್ವೈನ್

★ ಪ್ರಾಮಾಣಿಕ ಭಿನ್ನಮತ ಎಷ್ಟೋ ಸಲ ಪ್ರಗತಿಯ ಉತ್ತಮ ಸಂಕೇತವೂ ಆಗುತ್ತದೆ.
ಮಹಾತ್ಮ ಗಾಂಧಿ

★ ದೇಶ ಆಳುವವರು ವ್ಯಾಪಾರಿಗಳಾದರೆ ಪ್ರಜೆಗಳು ಭಿಕಾರಿಗಳಾಗುತ್ತಾರೆ.
ಚಾಣಕ್ಯ

★ ಕಾಲು ಜಾರಿದರೆ ಬೇಗ ಗುಣ ಕಾಣಬಹುದು; ನಾಲಗೆ ಜಾರಿದರೆ ಜೀವನಪರ್ಯಂತ ಗುಣ ಕಾಣುವುದಿಲ್ಲ.
ಬೆಂಜಮಿನ್ ಫ್ರಾಂಕ್ಲಿನ್

★ ಬೇರೆಯವರ ದುರದೃಷ್ಟವನ್ನು ನೋಡಿ ಜಾಣರಾಗಿ; ನಿಮ್ಮ ದುರದೃಷ್ಟಕ್ಕಾಗಿ ಕಾಯಬೇಡಿ.
—ಈಸೋಪ

★ ತಪ್ಪುಗಳ ಬಗ್ಗೆ ನಾಚಿಕೆ ಪಡಲು ಸಂಕೋಚ ಬೇಡ; ಇಲ್ಲವಾದಲ್ಲಿ ಅವೇ ಅಪರಾಧಗಳಾಗುತ್ತವೆ.
ಕನ್‌ಫ್ಯೂಶಿಯಸ್

★ ಪುರುಷನೊಬ್ಬ ಯಾವುದೇ ಮಹಿಳೆಯ ಜತೆಗೆ ಸಂತೋಷದಿಂದ ಇರಬಹುದು ಆಕೆಯನ್ನು ಪ್ರೀತಿಸದಿದ್ದರೆ!
ಆಸ್ಕರ್ ವೈಲ್ಡ್

★ ಯಶಸ್ಸು ಎಂದರೆ ನಿಮ್ಮನ್ನು ನೀವೇ ಮೆಚ್ಚಿಕೊಳ್ಳುವುದು; ನಿಮ್ಮ ಕೆಲಸವನ್ನು, ಕೆಲಸದ ವಿಧಾನವನ್ನು ನೀವೇ ಮೆಚ್ಚಿಕೊಳ್ಳುವುದು.
ಮಾಯಾ ಏಂಜೆಲೊ

ಗೊತ್ತಿದ್ದವನು ಮಾತನಾಡುವುದಿಲ್ಲ, ಮಾತನಾಡುವವರಿಗೆ ಗೊತ್ತಿರುವುದಿಲ್ಲ.
ಲಾವೊ ತ್ಸು